**OS: 2/2020**

**P.W-1**

## <u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>

ದಿನಾಂಕಃ 12.09.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆ**:ವಾದಿ ಪರ ವಕೀಲರಿಂದ,</u>

ನಾನು ದಿನಾಂಕ 12.09.2024 ರಂದು ನಮ್ಮ ವಕೀಲರ ಮೂಲಕ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಹಾಗೂ ಈ ಕೆಳಗೆ ನಮೂದಿಸಿರುವ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

ನಾನು ನನ್ನ ದಾವೆಗೆ ಸಂಬಂಧಿಸಿದಂತೆ ದಾವಾ ಆಸ್ತಿಗೆ ಸಂಬಂಧಿಸಿದ ಮೂರು ತೆರಿಗೆ ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-1 ರಿಂದ 3 ಎಂದು, ಎರಡು ಅಸ್ಸೆಸ್‌ಮೆಂಟ್ ರಿಜಿಸ್ಟರ್ ದಾಖಲೆಗಳನ್ನು ನಿಪಿ-4 ಮತ್ತು 5 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಕೈ ಬರವಣಿಗೆ ದಾಖಲೆಗಳನ್ನು ನಿಪಿ-6 ರಿಂದ 11 ಎಂದು, ಗಣಕೀಕೃತ ಪಹಣಿ ದಾಖಲೆಗಳನ್ನು ನಿಪಿ-12 ರಿಂದ 33 ಎಂದು, ನಾಲ್ಕು ಎಂ.ಆರ್ ದಾಖಲೆಗಳನ್ನು ನಿಪಿ-34 ರಿಂದ 37 ಎಂದು, ಮೌಲ್ಯ ದೃಢೀಕರಣ ಪತ್ರದ ದೃಢಿಕೃತ ಪ್ರತಿಗಳನ್ನು ನಿಪಿ-38 ರಿಂದ 40 ಎಂದು, ಇ.ಸಿ.ದಾಖಲೆಗಳನ್ನು ನಿಪಿ-41 ಎಂದು, ಅಸ್ಸೆಸ್ ಮೆಂಟ್ ರಿಜಿಸ್ಟರ್ ಎಕ್ಸಟ್ರ್ಯಾಕ್ಟ್ ನ್ನು ನಿಪಿ-42 ಎಂದು, ಓಎಸ್ ನಂ.291/2019 ರ ಆದೇಶ ಪುಟದ ದೃಢಿಕೃತ ಪ್ರತಿ ಮತ್ತು ಮಧ್ಯಂತರ ಅರ್ಜಿಯ ದೃಢಿಕೃತ ಪ್ರತಿಯನ್ನು ನಿಪಿ- 43 ಎಂದು, ಎಫ್ ಡಿ ಪಿ 3/2010 ರ ಆದೇಶ ಪುಟದ ದೃಢಿಕೃತ ಪ್ರತಿ ನಿಪಿ-44 ಎಂದು, ಸದರಿ ಪ್ರಕರಣದ ಅಂತಿಮ ಆದೇಶದ ದೃಢಿಕೃತ ಪ್ರತಿಯನ್ನು ನಿಪಿ- 45 ಎಂದು, ಕೊರ್ಟ್ ಕಮೀಷನರ್ ವರದಿಯ ದೃಢಿಕೃತ ಪ್ರತಿಯನ್ನು ನಿಪಿ- 46 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**